ತಾರೀಖು 30ನೆ ನವೆಂಬರ್ 1903.

ನಂ. ರೆ. 1543—ರೆ. ಫೈ. 19—1900, ಮೈಸೂರ ಸರ್ವಿಸ್ ರೆಗ್ಯುಲೇರ್ಷ್‌ಗಳ 188ನೆ ಆರ್ಟಿಕಲ್ ಅನುಸರಿಸಿ ಮೈಸೂರು ಡಿಸ್ಟ್ರಿಕ್ಟು ಟಿ. ನರಸೀಪುರದ ತಾಲ್ಲೂಕಿನ ಅಮಲ್‌ದಾರ್‌ರಾದ ಮೆ॥ ಎಂ. ಜೆ. ಕೃಷ್ಣಸ್ವಾಮಿ ರಾಯರಿಗೆ 1903ನೆ ಅಕ್ಟೋಬರ್ 19ನೆ ತಾರೀಖಿನಾರಭ್ಯ 1 ತಿಂಗಳು 10 ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತದೆ.

ಸದರೀಯವರು ಮೇಲ್ಕಂಡ ರಜಾದಲ್ಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ತಾಲ್ಲೂಕು ಷಿರಿಸ್ತೆದಾರ್‌ರಾದ ಕೃಷ್ಣಪ್ಪನವರು ಅಮಲ್‌ದಾರ್ ವ. ಮೂರನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕು ಕೆಲಸ ನೋಡತಕ್ಕದ್ದು.

ಬೆಂಗಳೂರಲ್ಲಿ ಜನರಲ್ ವ ರೆವಿನ್ಯೂ ಸೆಕ್ರಿಟೇಯಟ್ ಆಫೀಸಿನಲ್ಲಿಡಲ್ಪಟ್ಟಿರುವ ಅರ್ಜೀ ಪೆಟ್ಟಿಗೆಯು ದಿನವಹೀ ಜನರಲ್ ವ ರೆವಿನ್ಯೂ ಇಲಾಖೆಗಳ ಗವರ್ನ್‌ಮೆಂಟ್ ಸೆಕ್ರಿಟರಿ ಯವರಿಂದಲೂ, ಅವರು ಬೆಂಗಳೂರಲ್ಲಿ ಇಲ್ಲದ ಕಾಲದಲ್ಲಿ ಡೆಪ್ಯುಟಿ ಸೆಕ್ರಿಟರಿ ಯವರಿಂದಲೂ, ಮಧ್ಯಾನ್ಹ 12 ಘಂಟೆಗೆ ತೆಗಿಯಲ್ಪಟ್ಟು, ಅದರಲ್ಲಿನ ಅರ್ಜಿಗಳು ತೆಗದುಕೊಳ್ಳಲ್ಪಡುವವು.

ಹುಕುಂ ಬಮೋಜೀಬ್,
ಹೆಚ್. ವಿ. ನಂಜುಂಡಯ್ಯ,
ಜನರಲ್ ವ ರೆವಿನ್ಯೂ ಇಲಾಖೆಗಳ ಗವರ್ನ್‌ಮೆಂಟ್ ಸೆಕ್ರಿಟರಿ.

ಫಾರೆಸ್ಟ್.

ಇಸ್ತಿಹಾರ್‌ನಾಮೆ.

ತಾರೀಖು 30ನೆ ನವೆಂಬರ್ 1903.

ನಂ. 352—3783, ಸ್ಯ 1900ನೆ ಇಸವಿಯ XIನೆ ನಂಬರ್ ಮೈಸೂರು ಸೀಮೆಯ ಫಾರೆಸ್ಟ್ ರೆಗ್ಯುಲೇರ್ಷ್ 17ನೆ ಸೆಕ್ಷನಿನ ವಿಧಿಗಳನುಸರಿಸಿ ಮೈಸೂರ ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದವರು ಪ್ರಸಿದ್ಧಪಡಿಸುವದೇನಂದರೆ, ಈ ಇಸ್ತಿಹಾರ್‌ನಾಮೆಗೆ ಜಂಟಿಸಿರುವ ಷೆಡ್ಯೂಲಿನಲ್ಲಿ ನಮೂದಿಸಿರುವ ಚಕ್ತುಬಂದಿಯುಳ್ಳ ಪ್ರದೇಶವು 1904ನೆ ಜನವರಿ ಗುರ್ಯ ಲಾಗಾಯತು ಸದರೀ ಇಸ್ತಿಹಾರಿನ ಅಡೀಲಿ ವಿವರಿಸಿರುವ ಹಕ್ಕುಗಳ ಚಲಾವಣೆಗೆ ಒಳಪಟ್ಟು "ಸ್ಟೇಟ್ ಫಾರೆಸ್ಟ್‌ಗಾಗಿ" ಇರತಕ್ಕದ್ದೆಂದು ಎಣಿಸಲ್ಪಟ್ಟಿರುತ್ತೆ:—

ಷೆಡ್ಯೂಲ್.

ಡಿಸ್ಟ್ರಿಕ್ಟು.	ತಾಲ್ಲೂಕು.	ಸುಮಾರು ವಿಸ್ತೀರ್ಣ.	ಬ್ಲಾಕಿನ ಹೆಸರು.	ಚಕ್ತುಬಂದಿ.
ತುಮಕೂರು.	ಕೊರಟಗೆರೆ ಸಬ್ ತಾಲ್ಲೂಕು.	1,649 ಎಕ್ರೆ 17 ಗುಂಟೆಗಳು.	ಸೆದ್ದಗಿರಿ ಸ್ಟೇಟ್ ಫಾರೆಸ್ಟ್ ಕೋಳಿಕಲ್ ಬ್ಲಾಕಿನ ಪಡಾನಣಿ.	ಉತ್ತರಕ್ಕೆ.—ನೆಗಲಾಲಿನ ಸರ್ವೆ ನಂ. 88ರ ನೈರುತ್ಯ ಮೂಲೆಯಿಂದ ಹೊರಟು ಪೈನು ಅದೇ ನಂಬರಿನ ದಕ್ಷಿಣ ಪಾರ್ಶ್ವದ ಉದ್ದಕ್ಕೂ ಬುದಗಾವಿಯ ಸರ್ವೆ ನಂ. 29ರ ನೈರುತ್ಯ ಮೂಲೆಗೆ ಹೋಗುತ್ತದೆ. ಆಮೇಲೆ ಸರ್ವೆ ನಂ. 29 ಮತ್ತು 31 ಇವುಗಳ ದಕ್ಷಿಣ ಪಾರ್ಶ್ವದ ಉದ್ದಕ್ಕೂ ಸರ್ವೆ ನಂ. 32ರ ನೈರುತ್ಯ ಮೂಲೆಯನ್ನು ಮುಟ್ಟುವ ಸ್ಥಳಕ್ಕೆ ಹೋಗುತ್ತದೆ. ತರುವಾಯ ಸರ್ವೆ ನಂ. 32ರ ದಕ್ಷಿಣ ಪಾರ್ಶ್ವ ಮತ್ತು ಸರ್ವೆ ನಂ. 33ರ ಪಶ್ಚಿಮ ಪಾರ್ಶ್ವ ಇವುಗಳ ಉದ್ದಕ್ಕೂ ಸರ್ವೆ ನಂ. 14ರ ನೈರುತ್ಯ ಮೂಲೆಗೆ ಹೋಗುತ್ತದೆ. ತರುವಾಯ ಸರ್ವೆ ನಂ 14, 11 ಮತ್ತು 17 ಇವುಗಳ ದಕ್ಷಿಣ ಪಾರ್ಶ್ವದ ಉದ್ದಕ್ಕೂ ಆಖ್ಯೈರ ನಂಬರಿನ ಆಗ್ನೇಯ ಮೂಲೆಗೆ ಹೋಗುತ್ತದೆ. ಆಮೇಲೆ ಬುದಗಾವಿಯ ಸರ್ವೆ ನಂ. 17, 7 ಮತ್ತು 6 ಇವುಗಳ ಪೂರ್ವ ಪಾರ್ಶ್ವದ ಉದ್ದಕ್ಕೂ ಆಖ್ಯೈರ ಸರ್ವೆ ನಂಬರಿನ ಈಶಾನ್ಯ ಮೂಲೆಗೆ ಹೋಗುತ್ತದೆ. ತರುವಾಯ ಬುದಗಾವಿಯ ಸರ್ವೆ ನಂ. 35, 39 ಮತ್ತು 38 ಇವುಗಳ ದಕ್ಷಿಣ ಎಲ್ಲೆಯಾಗಿರುವ ನಾಲಾ ಉದ್ದಕ್ಕೂ ಕುಂಟೇನಹಳ್ಳಿಯ ಸರ್ವೆ ನಂ. 11ರ ವಾಯುವ್ಯ ಮೂಲೆಗೆ ಹೋಗುತ್ತದೆ. ಪೂರ್ವಕ್ಕೆ.—ಆಮೇಲೆ ಕುಂಟೇನಹಳ್ಳಿಯ ಸರ್ವೆ ನಂ. 11 ಮತ್ತು ಬೆಂದೋಣಿಯ ಸರ್ವೆ ನಂ. 26 ಮತ್ತು 25 ಇವುಗಳ ಪಶ್ಚಿಮ ಪಾರ್ಶ್ವದ ಉದ್ದಕ್ಕೂ ಮದ್ದಗಿರಿ ಸ್ಟೇಟ್ ಫಾರೆಸ್ಟ್ ಕೋಳಿಕಲ್ ಬ್ಲಾಕಿನ ಎಲ್ಲೆಗೆ ಹೋಗುತ್ತದೆ. ತರುವಾಯ ಮೇಲ್ಕಂಡ ಎಲ್ಲೆಯ ಉದ್ದಕ್ಕೂ ಕುರ್ಚಕೋಟೆಯ ಸರ್ವೆ ನಂ. 66ರ ವಾಯುವ್ಯ ಮೂಲೆಗೆ ಹೋಗುತ್ತದೆ. ದಕ್ಷಿಣಕ್ಕೆ.—ಆಮೇಲೆ ಕುರ್ಚಕೋಟೆಯ ಸರ್ವೆ ನಂ. 53ರ ಉತ್ತರ ಪಾರ್ಶ್ವದ ಉದ್ದಕ್ಕೂ ಅದರ ವಾಯುವ್ಯ ಮೂಲೆಗೆ ಹೋಗುತ್ತದೆ. ತರುವಾಯ ಜುಂಜರಾವನಹಳ್ಳಿಯ ಸರ್ವೆ ನಂ. 1ರ ಮಧ್ಯೆ ಅದೇ ಗ್ರಾಮದ ಸರ್ವೆ ನಂ. 60ರ ಪೂರ್ವ ಎಲ್ಲೆಯನ್ನು ಮುಟ್ಟುವ ಸ್ಥಳಕ್ಕೆ ಹೋಗುತ್ತದೆ. ಪಶ್ಚಿಮಕ್ಕೆ.—ಆಮೇಲೆ ಜುಂಜರಾವನ ಹಳ್ಳಿಯ ಸರ್ವೆ ನಂ. 60 ಮತ್ತು ಮಾರೆನಾಯಕನ ಹಳ್ಳಿಯ ಸರ್ವೆ ನಂ. 42 ಇವುಗಳ ಪೂರ್ವ ಪಾರ್ಶ್ವದ ಉದ್ದಕ್ಕೂ ಅದರ ವಾಯುವ್ಯ ಮೂಲೆಗೆ ಹೋಗುತ್ತದೆ. ತರುವಾಯ ಈಶಾನ್ಯ ದಿಕ್ಕಾಗಿ ನೆಗಲಾಲಿನ ಸರ್ವೆ ನಂ. 102ರ ಮಧ್ಯೆ ಹೊರಟ ಸ್ಥಳಕ್ಕೆ ಹೋಗುತ್ತದೆ.

ಪರಾ.—ಎ.—ನಾಲ್ಕು ಗಜಗಳಿಗೆ ಮಿಾರದ ಅಗಲಕ್ಕೆ ಹಾದಿಯು ಇದರಿೀ ಕಂಡ ಹಕ್ಕುಗಳು ಜನಗಳಿಗೆ ಮಾತ್ರ ಬ್ಲಾಕಿನಲ್ಲಿ ಕೊಡಲ್ಪಟ್ಟಿರುತ್ತವೆ :—

1. ಕುರಂಕೋಟೆಯಿಂದ ಸಿದ್ದೇಶ್ವರದೇವಸ್ಥಾನಕ್ಕೆ ಹಾದಿ. ಈ ಹಾದಿಯು ಸ್ಟೇಟ್ ಫಾರೆಸ್ಟನ್ನು ಕುರಂಕೋಟೆಯ ಸರ್ವೆ ನಂ. 53ಕ್ಕೂ ಮತ್ತು 52ಕ್ಕೂ ಮಧ್ಯೆ ಹಬ್ಬು ವಿಂಗಡಿಸಲ್ಪಟ್ಟ ಲೈನಿನಲ್ಲಿ ಅದೇ ಗ್ರಾಮದ ಸರ್ವೆ ನಂ. 65ರ ನೈರುತ್ಯ ಮೂಲೆಯಿಂದ 200 ಗಜಗಳ ಫಾರಲೆಯಲ್ಲಿ ಪ್ರವೇಶಿಸಿ 1,97 ಗಜಗಳ ವರಿಗೆ ಉತ್ತರ ದಿಕ್ಕಾಗಿಯು, ಮತ್ತು ವಾಯುವ್ಯ ದಿಕ್ಕಾಗಿಯು ಸದರೀ ಸ್ಟೇಟ್ ಫಾರೆಸ್ಟಿನಲ್ಲಿನ ಬೆಟ್ಟದಲ್ಲಿರುವ ದೇವಸ್ಥಾನವನ್ನು ಮುಟ್ಟುವ ವರಿಗೆ ಹೋಗುತ್ತದೆ.

2. ಕುರಂಕೋಟೆಯಿಂದ ಈಶ್ವರ ದೇವಸ್ಥಾನಕ್ಕೆ ಹಾದಿ. ಈ ಹಾದಿಯು ಫಾರೆಸ್ಟನ್ನು ಕುರಂಕೋಟೆಯ ಸರ್ವೆ ನಂ. 53ಕ್ಕೂ ಮತ್ತು 52ಕ್ಕೂ ಮಧ್ಯೆ ಸದ್ದು ವಿಂಗಡಿಸಲ್ಪಟ್ಟ ಲೈನಿನ ಅದೇ ಗ್ರಾಮದ ಸರ್ವೆ ನಂ. 53ರ ವಾಯುವ್ಯ ಮೂಲೆಯಿಂದ 2 ಫರ್ಲಾಂಗುಗಳ ದೂರದಲ್ಲಿ ಪ್ರವೇಶಿಸಿ 5 ಫರ್ಲಾಂಗುಗಳ ವರಿಗೆ ವಾಯುವ್ಯ ದಿಕ್ಕಾಗಿ ಸದರೀ ಸ್ಟೇಟ್ ಫಾರೆಸಿನ ಬೆಟ್ಟದಲ್ಲಿರುವ ಈಶ್ವರ ದೇವಸ್ಥಾನಕ್ಕೆ ಹೋಗುತ್ತದೆ.

3. ಜಂಜರಾವನಹಳ್ಳಿಯಿಂದ ಈಶ್ವರ ದೇವಸ್ಥಾನಕ್ಕೆ ಹಾದಿ. ಈ ಹಾದಿಯು ಫಾರೆಸ್ಟನ್ನು ಕುರಂಕೋಟೆಯ ಸರ್ವೆ ನಂ. 55ರ ವಾಯುವ್ಯ ಮೂಲೆಯಿಂದ 2 ಫರ್ಲಾಂಗುಗಳ ದೂರದ ಜಂಜರಾವನ ಹಳ್ಳಿಯ ಸರ್ವೆ ನಂ. 1ರ ಮಧ್ಯೆ ಹೋಗುವ ಹಬ್ಬು ವಿಂಗಡಿಸಲ್ಪಟ್ಟ ಲೈನಿನಲ್ಲಿ ಪ್ರವೇಶಿಸಿ 2,354 ಗಜಗಳ ವರಿಗೆ ಈಶಾನ್ಯ ದಿಕ್ಕಾಗಿ ದೇವಸ್ಥಾನವನ್ನು ಮುಟ್ಟುವ ವರಿಗೂ ಹೋಗುತ್ತದೆ.

4. ನೇಗಲಾಲಿನಿಂದ ಸಿದ್ದೇಶ್ವರ ದೇವಸ್ಥಾನಕ್ಕೆ ಹಾದಿ. ಈ ಹಾದಿಯು ಫಾರೆಸ್ಟನ್ನು ಬುದಗಾವಿಯ ಸರ್ವೆ ನಂ. 31ರಲ್ಲಿ ಅದೇ ಸರ್ವೆ ನಂಬರಿನ ನೈರುತ್ಯ ಮೂಲೆಯಿಂದ 110 ಗಜಗಳ ದೂರದಲ್ಲಿ ಪ್ರವೇಶಿಸಿ 1,334 ಗಜಗಳ ವರಿಗೆ ಆಗ್ನೇಯ ದಿಕ್ಕಾಗಿ ದೇವಸ್ಥಾನಕ್ಕೆ ಹೋಗುತ್ತದೆ.

ತಾರೀಖು 30ನೆ ನವೆಂಬರ್ 1903.

ನಂ. 356—3787, ಸ್ ಸ 1900ನೆ ಇಸವಿಯ XIನೆ ನಂಬರ್ ಮೈಸೂರು ಸೀಮೆಯ ಫಾರೆಸ್ಟ್ ರೆಗ್ಯುಲೇಷನ್ 17ನೆ ಸೆಕ್ಷನಿನ ವಿಧಿಗಳನುಸರಿಸಿ ಮೈಸೂರ ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದವರು ಪ್ರಸಿದ್ಧಪಡಿಸುವವೇಳೆದರೆ, ಈ ಇಸ್ತಿಹಾರ್ನಾಮೆಗೆ ಜಂಟಿಸಿರುವ ಷೆಡ್ಯೂಲಿನಲ್ಲಿ ನಮೂದಿಸಿರುವ ಜಕ್ಕು ಬಂದಿಮುಳ್ಳಿ ಪ್ರದೇಶವು 1904ನೆ ಜನವರಿ ಗರ್ ಲಾಗಾಯತು ಸದರೀ ಇಸ್ತಿಹಾರಿನ ಅಡೀಲಿ ವಿವರಿಸಿರುವ ಹಕ್ಕುಗಳ ಚಲಾವಣೆಗೆ ಬಳಪಟ್ಟು "ಸ್ಟೇಟ್ ಫಾರೆಸ್ಟ" ಇರತಕ್ಕದ್ದೆಂದು ಮಿಸಲ್ಪಟ್ಟಿರುತ್ತೆ :—

ಷೆಡ್ಯೂಲ್.

ತಾಲ್ಲೂಕು.	ಹೋಬಳಿ.	ಸುಮಾರು ವಿಸ್ತೀರ್ಣ. ಎ.	ಗು.	ಹಳ್ಳಿಗಳ ಹೆಸರು.	ಚಕ್ಕುಬಂದಿ.
ಮಾಗಡಿ.	ಕೊಡಗಿಹಳ್ಳಿ ಸಬ್ ತಾಲ್ಲೂಕು.	911	22	ಈಚಗಲ್.	ಉತ್ತರಕ್ಕೆ.—ಕರಿಯಮ್ಮನ ಹಳ್ಳಿಯ ಸರ್ವೆ ನಂ. 2ರ ನೈರುತ್ಯ ಮೂಲೆಯಿಂದ ಹೊರಟು ಲೈನು ಅದೇ ನಂಬರಿನ ದಕ್ಷಿಣ ಪಾರ್ಶ್ವದ ಉದ್ದಕ್ಕೂ ಸಂಗಾಪುರದ ಸರ್ವೆ ನಂ. 9ರ ನೈರುತ್ಯ ಮೂಲೆಗೆ ಹೋಗುತ್ತದೆ. ತರುವಾಯ ಸಂಗಾಪುರದ ಸರ್ವೆ ನಂ. 9 ಮತ್ತು ಬರ್ಕದ ಸರ್ವೆ ನಂ. 71 ಇವುಗಳ ದಕ್ಷಿಣ ಪಾರ್ಶ್ವಗಳ ಉದ್ದಕ್ಕೂ ಅದೇ ಗ್ರಾಮದ ಸರ್ವೆ ನಂ. 69ರ ಆಗ್ನೇಯ ಮೂಲೆಯನ್ನು ಮುಟ್ಟುವ ಸ್ಥಳಕ್ಕೆ ಹೋಗುತ್ತದೆ. ಆಮೇಲೆ ಸರ್ವೆ ನಂ. 64ರ ದಕ್ಷಿಣ ಪಾರ್ಶ್ವದ ಉದ್ದಕ್ಕೂ ಅದರ ಆಗ್ನೇಯ ಮೂಲೆಗೆ ಹೋಗುತ್ತದೆ. ತರುವಾಯ ಅಗ್ರಹಾರದ ದಕ್ಷಿಣ ಎಲ್ಲೆಯ ಉದ್ದಕ್ಕೂ ತರಟೆರೊಪ್ಪದ ಸರ್ವೆ ನಂ. 65ರ ಈಶಾನ್ಯ ಮೂಲೆಗೆ ಹೋಗುತ್ತದೆ. ಪೂರ್ವಕ್ಕೆ.—ಆಮೇಲೆ ತರಟೆರೊಪ್ಪದ ಸರ್ವೆ ನಂ. 65ರ ಉತ್ತರ ವ ಪಶ್ಚಿಮ ಪಾರ್ಶ್ವಗಳು ಮತ್ತು ಸರ್ವೆ ನಂ. 116ರ ಪಶ್ಚಿಮ ಪಾರ್ಶ್ವ ಇವುಗಳ ಉದ್ದಕ್ಕೂ ಅಬ್ಬೇರ ಸರ್ವೆ ನಂಬರಿನ ನೈರುತ್ಯ ಮೂಲೆಗೆ ಹೋಗುತ್ತದೆ. ದಕ್ಷಿಣಕ್ಕೆ.—ತರುವಾಯ ತರಟೆರೊಪ್ಪದ ಸರ್ವೆ ನಂ. 69 ವ 67 ಇವುಗಳ ಉತ್ತರ ಪಾರ್ಶ್ವದ ಉದ್ದಕ್ಕೂ ಅಬ್ಬೇರ ಸರ್ವೆ ನಂಬರಿನ ವಾಯುವ್ಯ ಮೂಲೆಗೆ ಹೋಗುತ್ತದೆ. ಆಮೇಲೆ ಸರ್ವೆ ನಂ. 67ರ ಪಶ್ಚಿಮ ವ ದಕ್ಷಿಣ ಪಾರ್ಶ್ವಗಳ ಉದ್ದಕ್ಕೂ ತರುವಾಯ ಸರ್ವೆ ನಂ. 67, 70, 73 ವ 13 ಇವುಗಳ ಪಶ್ಚಿಮ ಪಾರ್ಶ್ವಗಳ ಉದ್ದಕ್ಕೂ ಅದೇ ಗ್ರಾಮದ ಸರ್ವೆ ನಂ. 114ರ ಈಶಾನ್ಯ ಮೂಲೆಗೆ ಹೋಗುತ್ತದೆ. ತರುವಾಯ ತರಟೆರೊಪ್ಪದ ಸರ್ವೆ ನಂ. 114ರ ಉತ್ತರ ಪಾರ್ಶ್ವ ಮತ್ತು ಸರ್ವೆ ನಂ. 83ರ ಉತ್ತರ ವ ಪಶ್ಚಿಮ ಪಾರ್ಶ್ವಗಳು ಇವುಗಳ ಉದ್ದಕ್ಕೂ ಹೆನ್ನೆಪಟ್ಟಣದ ಸರ್ವೆ ನಂ. 7ರ ಈಶಾನ್ಯ ಮೂಲೆಗೆ ಹೋಗುತ್ತದೆ. ಆಮೇಲೆ ಅದೇ ಸರ್ವೆ ನಂ. 7ರ ಉತ್ತರ ವ ವಾಯುವ್ಯ ಪಾರ್ಶ್ವಗಳ ಉದ್ದಕ್ಕೂ ಅದೇ ಗ್ರಾಮದ ಸರ್ವೆ ನಂ. 5ರ ಆಗ್ನೇಯ ಮೂಲೆಗೆ ಹೋಗುತ್ತದೆ. ತರುವಾಯ ಅದೇ ಸರ್ವೆ ನಂಬರಿನ ಈಶಾನ್ಯ, ಉತ್ತರ ಮತ್ತು ವಾಯುವ್ಯ ಪಾರ್ಶ್ವಗಳ ಉದ್ದಕ್ಕೂ ಕಂಬದ ಹಳ್ಳಿಯ ಎಲ್ಲೆ ಬಾಂದಾರಿಗಳಿಗೆ ಹೋಗುತ್ತದೆ. ಪಶ್ಚಿಮಕ್ಕೆ.—ಆಮೇಲೆ ಕಂಬದ ಹಳ್ಳಿಯ ಸರ್ವೆ ನಂ. 15, 14, 13, 12, 1, 6 ವ 7 ಇವುಗಳ ಪೂರ್ವ ಪಾರ್ಶ್ವಗಳ ಉದ್ದಕ್ಕೂ ಅದೇ ಗ್ರಾಮದ ಸರ್ವೆ ನಂ. 8ರ ಈಶಾನ್ಯ ಮೂಲೆಗೆ ಹೋಗುತ್ತದೆ. ತರುವಾಯ ಸದರೀ ಸರ್ವೆ ನಂಬರಿನ ಉತ್ತರ ಪಾರ್ಶ್ವದ ಉದ್ದಕ್ಕೂ ಅದೇ ಗ್ರಾಮದ ಸರ್ವೆ ನಂ. 9ರ ಆಗ್ನೇಯ ಮೂಲೆಗೆ ಹೋಗುತ್ತದೆ. ತರುವಾಯ ಸದರೀ ಸರ್ವೆ ನಂ. 9ರ ಪೂರ್ವ ಪಾರ್ಶ್ವದ ಉದ್ದಕ್ಕೂ ಹೊರಟು ಸ್ಥಳಕ್ಕೆ ಹೋಗುತ್ತದೆ.

582

ಪರಾ.—ಹಾದಿಯು ಇದರಡೀ ಕಂಡ ಹಕ್ಕುಗಳು ಬ್ಯಾಕಿನಲ್ಲಿ ಕೊಡಲ್ಪಟ್ಟಿರುತ್ತವೆ :—

1. ಸರ್ವೆ ನಂ. 11ರ ಹದ್ದುವಿಂಗಡಿಸಲ್ಪಟ್ಟ ಲೈನಿನಲ್ಲಿ ಹಾದಿಯು ಹಕ್ಕು ಕಂಬದಹಳ್ಳಿ ಗ್ರಾಮಸ್ಥರ ದನಗಳಿಗೋಸ್ಕರ ಅವರ ಗೋಮಾಳ ಭೂಮಿಗಳಿಗೆ ಕೊಡಲ್ಪಟ್ಟಿರುತ್ತದೆ. ಈ ಹಾದಿಯು ಕಂಬದಹಳ್ಳಿಯ ಸರ್ವೆ ನಂ. 13ರ ಆಗ್ನೇಯ ಮೂಲೆಯಲ್ಲಿ ಹೊರಟು ಅದೇ ಗ್ರಾಮದ ಸರ್ವೆ ನಂ. 10ರ ಆಗ್ನೇಯ ಮೂಲೆಯಲ್ಲಿ ಆಖೈರಾಗುತ್ತದೆ. ಇದು 792 ಗಜಗಳು ಉದ್ದ ಮತ್ತು 22 ಗಜಗಳು ಅಗಲವುಳ್ಳದ್ದಾಗಿದೆ.

2. ಕಂಬದಹಳ್ಳಿಯ ಸರ್ವೆ ನಂ. 10ರಲ್ಲಿ ಹಾಲಿ ಇರುವ ಕಾಲಹಾದಿಯು 22 ಗಜಗಳ ಅಗಲಕ್ಕೆ ಸದರೀ ಗ್ರಾಮದ ದನಗಳಿಗೋಸ್ಕರ 418 ಗಜಗಳ ದೂರದಲ್ಲಿ ಕೊಳದವರಿಗೆ ಅಗಲ ಪಡಿಸಲ್ಪಡುವದು. ಈ ಹಾದಿಯು ಫಾರೆಸ್ಟನ್ನು ಸದರೀ ಸರ್ವೆ ನಂ. 10ರ ಆಗ್ನೇಯ ಮೂಲೆಯಲ್ಲಿ ಪ್ರವೇಶಿಸಿ ಉತ್ತರ ದಿಕ್ಕಾಗಿ ಕೊಳದ ವರಿಗೆ ಹೋಗುತ್ತದೆ.

3. ಕಂಬದಹಳ್ಳಿಯಿಂದ ಈ ಗ್ರಾಮದ ಸರ್ವೆ ನಂ. 10ರಲ್ಲಿ ಗೊಲ್ಲಹಳ್ಳಿಗೆ ಹಾಲಿ ಇರುವ ಕಾಲಹಾದಿಯು ಸಹಾ ಬಿಟ್ಟಿರುತ್ತದೆ. ಈ ಹಾದಿಯು ಫಾರೆಸ್ಟನ್ನು ಸರ್ವೆ ನಂ. 10ರ ಆಗ್ನೇಯ ಮೂಲೆಯಲ್ಲಿ ಪ್ರವೇಶಿಸಿ 836 ಗಜಗಳ ದೂರ ಉತ್ತರದಿಕ್ಕಾಗಿ ಹೋಗಿ ಫಾರೆಸ್ಟನ್ನು ಅದೇ ಸರ್ವೆ ನಂ. 10ರ ಈಶಾನ್ಯ ಮೂಲೆಯಲ್ಲಿ ಬಿಟ್ಟುಬಿಡುತ್ತದೆ.

ಹುಕುಂ ಬವೋಜೀಬ್,
ಜೆ. ಇ. ರಿಕೆಟ್ಸ್,
ಫಾರೆಸ್ಟ್ ಇಲಾಖೆಯ ಗವರ್ನ್‌ಮೆಂಟ್ ಅಫೀಷಿಯೇಟಿಂಗ್ ಸೆಕ್ರೆಟರಿ.

ಮುಜರೈ.

ಇನ್ಸ್ಟ್ರಾಮೆಂ.

ತಾರೀಖು 27ನೆ ನವಂಬರು 1903.

ನಂ. 1513—ಮು. ಫೈ. 2—93, ವ್ಯತಪಟ್ಟ ಮಾ॥ ರಾ॥ ರಾ॥ ವೆಂಕಟರಮಣಯ್ಯನವರು ಮತ್ತು ಮಾ॥ ರಾ॥ ರಾ॥ ಈರಡಿ ಸಿದ್ದಕೆಟ್ಟರು ಇವರುಗಳಿಗೆ ಬದಲಾಗಿ ಇದರಡೀ ಕಂಜ ದೊಡ್ಡ ಮನುಷ್ಯರುಗಳು ನಂಜಿನಗೂಡು ತಾಲ್ಲೂಕಿನ ಕಳಲೆಮುಲ್ಲಿರುವ ಶ್ರೀ ಲಕ್ಷ್ಮೀಕಾಂತ ಸ್ವಾಮಿಯ ದೇವಸ್ಥಾನದ ಧರ್ಮದರ್ಶಿಗಳಾಗಿ ಮೊಕರರ್ರಾಡಲ್ಪಟ್ಟಿರುತ್ತಾರೆ :—

(1) ಮಾ॥ ರಾ॥ ರಾ॥ ದೇವರಾಜಭಟ್ಟರು.
(2) ,, ಫ್ಲೀಡರಾದ ರಾಘವೇಂದ್ರರಾಯರು.

ಹುಕುಂ ಬವೋಜೀಬ್,
ಎಲ್. ಅನಂತಸ್ವಾಮಿ ರಾವ್,
ಮುಜರೈ ಇಲಾಖೆಯ ಡೆಪ್ಯುಟಿ ಸೆಕ್ರೆಟರಿ.

ಮಿಲಿಟೆರಿ.

ಇನ್ಸ್ಟ್ರಾರ್ನಾಮೆ.

ತಾರೀಖು 27ನೆ ನವಂಬರ್ 1903.

ನಂ. 1655—7, ಮೈಸೂರ ಶ್ರೀಮತ್ ಮಹಾರಾಜರವರು ಲೋಕಲ್ ಸರ್ವಿಸ್ ರೆಜಿಮೆಂಟಿನಲ್ಲಿ ಇದರಡೀ ಕಂಡ ಬಡ್ತಿಗಳು 1903ನೆ ಅಕ್ಟೋಬರ್ ಗುರ್ತೀ ತಾರೀಖಿನಾರಭ್ಯ ಮಾಡಿರುತ್ತಾರೆ :—

ಹೆಸರು.	ಯಾವ ದರ್ಜೆಯಿಂದ.	ಯಾವ ದರ್ಜೆಗೆ.
ಲಿಂಗೋಜಿ ನೋಹಿತೆಯವರು	ದಫೇದಾರ್	ಜಮೇದಾರ್
ಮಹಬೂತ್‌ಖಾ ಯವರು ...	ಡಿಟೋ	ಡಿಟೋ

ತಾರೀಖು 27ನೆ ನವಂಬರ್ 1903.

ನಂ. 1658—60, ಮೈಸೂರ ಪೈದಲ್ ಫಾಜಿನ ಮೊದಲನೇ ಪಟಾಲಮಿನಲ್ಲಿ ಇದರಡೀ ಕಂಡ ಬಡ್ತಿಯನ್ನು ಮೈಸೂರ ಶ್ರೀಮತ್ ಮಹಾರಾಜರವರು ಮಂಜೂರ್ಮಾಡಿರುತ್ತಾರೆ :—

ಹೆಸರು.	ಯಾವ ದರ್ಜೆಯಿಂದ.	ಯಾವ ದರ್ಜೆಗೆ.	ಪರಾ.
ಹನುಮಂತರಾವ್ ಸಾಲಂಕೆ ಯವರು.	ಮೊದಲನೇ ಗ್ರೇಡಿನ ಜಮೇದಾರ್.	ಎರಡನೇ ಗ್ರೇಡಿನ ಸುಬೇದಾರ್	1903ನೆ ಆಗಸ್ಟ್ 21ನೆ ತಾರೀಖಿನಾರಭ್ಯ

ಹುಕುಂ ಬವೋಜೀಬ್,
ಆರ್. ಜಿ. ಜೋನ್ಸ್, ಲೆಫ್ಟಿನೆಂಟ್ ಕರ್ನಲ್,
ಮಿಲಿಟೆರಿ ಅಸಿಸ್ಟೆಂಟ್.